ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ09.03.2022 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ. ವಿ ಆರ್ ಎನ್ ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಸಾಗುವಳಿ ಚೀಟಿಯ ದೃಢೀಕೃತ ಪ್ರತಿ ನಿಪಿ-1
2. ಮ್ಯುಟೇಶನ್ ರಿಜಿಸ್ಟರ್ ನಂಃ55/1998-99 ರ ದೃಢೀಕೃತ ಪ್ರತಿ ನಿಪಿ-2
3. ವಿದ್ಯಾರಣ್ಯಪುರ ಗ್ರಾಮದ ಸ.ನಂಃ372 ರ ಪಹಣಿ ಪತ್ರಿಕೆ ನಿಪಿ-3
4. ವಂಶವೃಕ್ಷ ಪ್ರಮಾಣಪತ್ರ ನಿಪಿ-4
5. ದಿನಾಂಕಃ29.05.2017 ರಂದು ತಹಶೀಲ್ದಾರ್, ಶೃಂಗೇರಿ ರವರು ನೀಡಿರುವ ಹಿಂಬರಹದ ಪ್ರತಿ ನಿಪಿ-5
6. ವಿದ್ಯಾರಣ್ಯಪುರ ಗ್ರಾಮ ಪಂಚಾಯ್ತಿಯ ಹಕ್ಕು ಬದಲಾವಣೆ ವಹಿಯ ದೃಢೀಕೃತ ಪ್ರತಿ ನಿಪಿ-6
7. ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ಪ್ರತಿ ನಿಪಿ-7
8. ದರಕಾಸ್ತು ಪೋಡಿ ಟಿಪ್ಪಣಿ ಬುಕ್ ನ ದೃಢೀಕೃತ ಪ್ರತಿ ನಿಪಿ-8
9. ನಕಾಶೆ ಸ್ಕೆಚ್ ನ ದೃಢೀಕೃತ ಪ್ರತಿ ನಿಪಿ-9
10. ಎರಡು ಪೋಟೋಗಳು ಮತ್ತು ಒಂದು ಸಿ.ಡಿ ಯನ್ನು ನಿಪಿ-10 ರಿಂದ 12 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಪರವಾಗಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರುತ್ತೇನೆ .

**ಪಾಟೀ ಸವಾಲುಃ** ಎದುರುದಾರರ ಪರ ವಕೀಲರು ಹಾಜರಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಶೃಂಗೇರಿ.